**ಸಾಕ್ಷಿಯನ್ನು ದಿನಾಂಕ 08.01.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ**

ನಾನು ಯಾವುದೇ ಪೈನಾನ್ಸ್ ಅನ್ನು ಮಾಡುವುದಿಲ್ಲ. ನಾನು ಬಾರಿನಲ್ಲಿ ಕ್ಯಾಶಿಯರ್ ಜೊತೆಗೆ ಪೈನಾನ್ಸ್ ಅನ್ನು ಸಹ ಮಾಡುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಹೇಳಿರುವಂತಹ ವ್ಯವಹಾರವೇ ನಾನು ಮೊದಲ ಬಾರಿ ಆರೋಪಿಯೊಂದಿಗೆ ಮಾಡಿರುವುದು. ನಗದು ನಾಲ್ಕು ಲಕ್ಷ ಹಣವನ್ನು ಆರೋಪಿಗೆ ಕೊಟ್ಟೆ. ಆರೋಪಿಗೆ ಹೊರತುಪಡಿಸಿ ಯಾರಿಗೂ ನಾನು ಕೈ ಸಾಲ ಕೊಟ್ಟಿಲ್ಲ. ಆರೋಪಿಯ ಅಂಗಡಿ ಪಕ್ಕದಲ್ಲಿ ಇರುವಂತಹ ಜನರಿಗೂ ಸಹ ನಾನು ಪೈನಾನ್ಸ್ ಕೊಟ್ಟಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ನಿ.ಪಿ.1 ಚೆಕ್ ಅನ್ನು ಆರೋಪಿಯೇ ಕೊಟ್ಟಿರುವುದು. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಆರೋಪಿಯು ಸಹಿಯನ್ನು ಕನ್ನಡದಲ್ಲಿ ಮಾಡಿರುತ್ತಾರೆ ಎಂದರೆ ಹೌದು. ನನ್ನ ಹೆಸರಾದ ಚಂದ್ರು ಎಂಬುದನ್ನು ಇಂಗ್ಲೀಷ್ ನಲ್ಲಿ ಬರೆದಿದ್ದಾರೆ ಎಂದರೆ ಹೌದು. ನಿಪಿ.1ರದಲ್ಲಿ ಒಕ್ಕಣೆಯ ಬರವಣಿಗೆಗೂ ಆರೋಪಿಯ ಸಹಿಯ ಬರವಣಿಗೆಗೂ ವ್ಯತ್ಯಾಸ ಇದೆ ಎಂದರೆ ಗೊತ್ತಿಲ್ಲ. ಆರೋಪಿಗೆ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ, ಆ ಕಾರಣ ನಾನೇ ಒಕ್ಕಣೆಯನ್ನು ತುಂಬಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಭದ್ರತೆಗಾಗಿ ಕೊಟ್ಟಿರುವಂತಹ ಚೆಕ್ ಅನ್ನು ನಾನು ದುರುಪಯೋಗಪಡಿಸಿಕೊಂಡು ನಾನು ಈ ಸುಳ್ಳು ಪ್ರಕರಣವನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

**2ನೇ ಎಎಸ್‌ಸಿಜೆ ಮತ್ತು ಎಸಿಜೆಎಂ,**
**ಬೆಂಗಳೂರು.**